**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.686/2014**

**ಪಿ.ಡಬ್ಲ್ಯೂ: 09**
**ಸಿ.ಡಬ್ಲ್ಯೂ: 10**

ಸಾಕ್ಷಿದಾರರ ಹೆಸರು : ಜ್ಯೋತಿಲಕ್ಷ್ಮೀ
ಗಂಡನ ಹೆಸರು : ವೆಂಕಟೇಶ
ವಯಸ್ಸು : 42 ವರ್ಷ
ಉದ್ಯೋಗ : ಅಟೆಂಡರ್
ವಾಸಸ್ಥಳ : ಬಾವಿಕೆರೆ

**ದಿನಾಂಕ: 10-12-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು 2010 ರಿಂದ 2015 ರವರೆಗೆ ಬಾವಿಕೆರೆ ಗ್ರಾಮ ಪಂಚಾಯ್ತಿಯ ಅಧ್ಯಕ್ಷಳಾಗಿದ್ದೇನು.

2 ನೇ ಆರೋಪಿ ರಾಮಯ್ಯ ಸದರಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಆಗಿದ್ದರು. 1 ನೇ ಆರೋಪಿ ಸೀತಾರಾಮ ತಾಲ್ಲೂಕು ಪಂಚಾಯ್ತಿಯ ಸದಸ್ಯನಾಗಿದ್ದರು. 3 ಜನ ಆರೋಪಿತರು ಬಾವಿಕೆರೆಯ ಅರಸೀಕೆರೆಯಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗವನ್ನು ಆರೋಪಿತರು ತಮ್ಮ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತಾರೆ. ಸದರಿ ವಿಷಯವು ನಮ್ಮ ಗಮನಕ್ಕೆ 1 ವಾರದ ನಂತರ ಬಂದಿರುತ್ತದೆ. ಅಸೆಸ್ ಮೆಂಟನ್ನು ಗ್ರಾಮಪಂಚಾಯ್ತಿ ಕಾರ್ಯದರ್ಶಿಯಾದ ರಾಮಯ್ಯನವರು ಅಸೆಸ್ ಮೆಂಟ್ ಪುಸ್ತಕದಲ್ಲಿ ನಮೂದಿಸಿರುತ್ತಾರೆ. ನಾವು ಕಾರಣ ಕೇಳಿ ಸದರಿ ಆರೋಪಿ ರಾಮಯ್ಯನವರಿಗೆ ನೋಟೀಸು ನೀಡಿರುತ್ತೇವೆ. ಆರೋಪಿ ರಾಮಯ್ಯನವರು ಸದರಿ ನೋಟೀಸಿಗೆ ಉತ್ತರ ನೀಡಿದ್ದು, ಅದರಲ್ಲಿ ತನಗೆ ಸೀತಾರಾಮು, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು, ಆರೋಪಿ ಸಂದೇಶ ರವರ ತಂದೆ ವಸಂತಕುಮಾರ್, ವೆಂಕಟೇಶ್ ರವರು ಹೆದರಿಸಿ ನನಗೆ ನಮೂದು ಮಾಡಲು ಹೇಳಿರುತ್ತಾರೆ ಎಂದು ತಿಳಿಸಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

***ಪಾಟೀಸವಾಲು ៖ 1ನೇ ಆರೋಪಿ ಪರ*** ಶ್ರೀ ಎಸ್ ಪಿ ***ವಕೀಲರಿಂದ.***

ನಾನು *2* ವರೆ ವರ್ಷ ಗ್ರಾಮ ಪಂಚಾಯ್ತಿ ಅಧ್ಯಕ್ಷಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಅಧ್ಯಕ್ಷಳಾಗಿದ್ದ ಸಮಯವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಮಂಜೇಗೌಡ, ಜಾನಕಿಬಾಯಿ, ನಿಜಗುಣ ಶಿವಯೋಗಿ, ನಾನು, ರಮೇಶ್ ಎ ಎನ್, ಗೌರಿಬಾಯಿ, ಸರೋಜಮ್ಮ, ಮುಂತಾದವರಿದ್ದು, ಅವರ ಹೆಸರು ನೆನಪಿಲ್ಲ. ತೋಟಗಾರಿಕೆ ಇಲಾಖೆಗೆ ಸೇರಿದ ಜಾಗದ ಸರ್ವೆ ನಂಬರ್ ಹಾಗೂ ಅದರ ಅಳತೆ ನನಗೆ ಗೊತ್ತಿಲ್ಲ. ನನಗೆ ಆರೋಪಿತರು ಎಸಗಿರುವ ಕೃತ್ಯದ ಬಗ್ಗೆ ಗಮನಕ್ಕೆ ತಂದಿರುವ ವ್ಯಕ್ತಿಗಳ ಹೆಸರು ಹೇಳಲಾಗುವುದಿಲ್ಲ. ಆರೋಪಿ ವೆಂಕಟೇಶನು ಚುನಾವಣೆಯಲ್ಲಿ ಆರೋಪಿ ಸೀತಾರಾಮು ಜೊತೆ ಓಡಾಡುವ ವ್ಯಕ್ತಿ ಎಂದರೆ ಸರಿ. ನಾನು ಚುನಾವಣೆಗೆ ನಿಂತಾಗ ಆರೋಪಿ ವೆಂಕಟೇಶ, ಸೀತಾರಾಮು ರವರು ನಮ್ಮ ವಿರುದ್ದ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿಯಲ್ಲ. ನಾನು ಅಧ್ಯಕ್ಷಳಾಗಿದ್ದ ಸಮಯದಲ್ಲಿ ಯಾವುದೇ ಪಂಚಾಯ್ತಿ ದಾಖಲೆಗಳು ನನ್ನ ಅನುಮತಿ ಇಲ್ಲದೇ ಹೊರಗಡೆ ಹೋಗುವುದಿಲ್ಲ ಎಂದರೆ ಸರಿ. ಪಂಚಾಯ್ತಿ ರಿಜಿಸ್ಟರಿನಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಜಾಗದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರೇ ಗ್ರಾಮ ಪಂಚಾಯ್ತಿ ಸದಸ್ಯರು ಸೇರಿ ಆರೋಪಿತರ ವಿರುದ್ದ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಅಸೆಸ್ ಮೆಂಟ್ ಎಕ್ಸ್ ಟ್ರ್ಯಾಕ್ಟಿಗಳಿಗೂ ಆರೇಪಿತರಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ.

*(2*ನೇ ಆರೋಪಿ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಪ್ರಾರ್ಥಿಸಿರುತ್ತಾರೆ. ಆದ್ದರಿಂದ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯ್ತು*)*

***ಮರುವಿಚಾರಣೆ៖*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***